# ಉಳಿಸ ಬನ್ನಿ ಅಘನಾಶಿನಿ



ಮಳೆಗಾಲದಲ್ಲಿ ತುಂಬಿ ಹರಿವ ಅಘನಾಶಿನಿಯ ವಿಹಂಗಮ ನೋಟ

■ ಗಣೇಶ ಹೊಸ್ಮನೆ

ಪಶ್ಚಿಮ ಘಟ್ಟದಿಂದ ಕೆಲವೇ ಕಿಲೋಮೀಟರ್ ದೂರದಲ್ಲಿ ಹುಟ್ಟಿ ಘಟ್ಟದ ಅಂಚಿನಲ್ಲೇ ನೂರಾರು ಕಿಲೋಮೀಟರ್ ಹರಿಯುತ್ತ ಅಬ್ಬರದ ಮಳೆಗಾಲವನ್ನು ಮೈದುಂಬಿಕೊಂಡು ಅರಬ್ಬಿ ಸಮುದ್ರ ಸೇರುವ ಉತ್ತರ ಕನ್ನಡದ ಮುಖ್ಯ ನದಿಗಳಲ್ಲೊಂದು ಅಘನಾಶಿನಿ. ಶಿರಸಿ ಸಿದ್ದಾಪುರ ಕುಮಟಾ ತಾಲ್ಲೂಕಿನ ಮೂಲೆ ಮೂಲೆಗಳಿಂದಲೂ ಇದರ ಹೊಳೆ ತೊರೆ ಕಾಲುವೆಗಳು ಜೀವನಾಡಿಯಂತೆ ಸಂಪರ್ಕಗೊಂಡಿದ್ದು ಜಿಲ್ಲೆಯ ವೈವಿಧ್ಯಮಯ ಜನ ಸಮುದಾಯ ಮತ್ತು ಸಂಸ್ಕೃತಿಯನ್ನು ತನ್ನ ತೀರದಲ್ಲಿ ಸಾವಿರಾರು ವರ್ಷಗಳಿಂದ ಪೋಷಿಸಿಕೊಂಡು ಬಂದಿದೆ.

ಗಂಗಾ ಯಮುನಾ ನದಿಗಳಿಗಿಂತಲೂ ಪುರಾತನವೆಂದೂ ಪರಿಶುದ್ಧವೆಂದೂ ವೈಜ್ಞಾನಿಕವಾಗಿ ಗುರುತಿಸಲಾಗುವ ಇದರ ವ್ಯಾಪ್ತಿಯ ಅರಣ್ಯ ಪ್ರದೇಶವು ಅಪಾರ ಸಸ್ಯ ಮತ್ತು ಜೀವ ವೈವಿಧ್ಯತೆಗೆ ಹೆಸರಾಗಿದೆ. ಸಿಂಗಳೀಕ ಸೇರಿದಂತೆ ಅಳಿವಿನ ಅಂಚಿನಲ್ಲಿರುವ ಹಲವು ವನ್ಯಜೀವಿಗಳ ಆಶ್ರಯತಾಣವಾಗಿದೆ. ಎಂದಿಗೂ ಬತ್ತದ ಮುಖ್ಯ ನದಿಪಾತ್ರವು ಅಡಿಕೆ, ಏಲಕ್ಕಿ, ಕಾಳುಮೆಣಸು, ತೆಂಗು, ಭತ್ತ ಬೆಳೆಯುವ ಕೃಷಿಕರ, ಕರಾವಳಿ ಭಾಗದ ಮೀನುಗಾರರ ಮುಖ್ಯ ಜೀವನಾಧಾರ ಸ್ತಂಭವೂ ಹೌದು.

ನದಿ ಕಣಿವೆಯ ಉಂಚಳ್ಳಿ, ಬುರುಡೆ, ಬೆಣ್ಣೆ ಹೊಳೆ ಮೊದಲಾದ ಜಲಪಾತಗಳು ನಾಡಿನ ಪ್ರವಾಸಿಗರಿಗೆ ಬಹುತೇಕ ಚಿರಪರಿಚಿತವಾದರೆ, ಇದರ ಮಳೆಕಾಡಿನ ಒಡಲೊಳಗೆ ರಹಸ್ಯವಾಗಿ ಹರಿಯುವ ನೂರಾರು ತೊರೆ ಜಲಪಾತಗಳ ಸೊಬಗನ್ನು ಸಾಹಸ ಪ್ರವೃತ್ತಿಯ ಸ್ಥಳೀಯರಷ್ಟೇ ಕಾಣುತ್ತಾರೆ.

ಇಂತಹ ಅಪರೂಪದ ನದಿಗೆ ಅಣೆಕಟ್ಟಿನ ಭಯ ಸದಾ ಕಾಡುತ್ತಲೇ ಬಂದಿದ್ದು, ಇದೀಗ ಅಘನಾಶಿನಿಯನ್ನು ಚಿತ್ರದುರ್ಗ ಜಿಲ್ಲೆಯ